22

ಅನುಬಂಧ-03

Laxmanrao Jarkiholi College of Education Vidyanagar GOKAK

# ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 43 ಯುಆರ್‌ಸಿ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:14-03-2005.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಉನ್ನತ ಶಿಕ್ಷಣ)
ಶಿಕ್ಷಣ ಇಲಾಖೆ,
ಬೆಂಗಳೂರು-560 001.

ಇವರಿಗೆ:

ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-580 003.

ಮಾನ್ಯರೇ,

**ವಿಷಯ:** 2004-2005ನೇ ಶೈಕ್ಷಣಿಕ ಸಾಲಿಗೆ ಗೋಕಾಕಿನ ಶ್ರೀ ಲಕ್ಷ್ಮಣರಾವ್ ಜಾರಕಿಹೋಳಿ ಕಾಲೇಜ್ ಆಫ್ ಎಜುಕೇಷನ್ ಕಾಲೇಜಿಗೆ ಸಂಯೋಜನೆ.

**ಉಲ್ಲೇಖ:** (1) ದಿನಾಂಕ:23-10-2003 ಸಂ. ಕವಿ/ವಿಮಂ(ಸಂಯೋಜನೆ) 2003-2004/3095ರ ಕುಲಸಚಿವರ ಪತ್ರ.
(2) ದಿನಾಂಕ:09-03-2005 ಸಂ.ಇಡಿ 43 ಯುಆರ್‌ಸಿ 2005ರ ಸರ್ಕಾರಿ ಪತ್ರ
(3) ದಿನಾಂಕ:14-03-2005 ಸಂಖ್ಯೆ: ಎಲ್‌ಇಟಿ/2004-05/184ರ ಕಾರ್ಯದರ್ಶಿಯವರ ಪತ್ರ

*****

1)ಬೆಳಗಾಂ ಜಿಲ್ಲೆಯ ಲಕ್ಷ್ಮಿ ಎಜುಕೇಷನ್ ಟ್ರಸ್ಟ್, ವಿದ್ಯಾನಗರ್, ಗೋಕಾಕ್ ಸಂಸ್ಥೆಯು/ಸಂಘವು ಕಾಲೇಜಿನ ಸಂಯೋಜನೆಗಾಗಿ ಮೇಲ್ಕಂಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನಾಧರಿಸಿ, ಶೈಕ್ಷಣಿಕ ಪರಿಷತ್ತಿನ ಸಮಾಲೋಚನೆಯೊಂದಿಗೆ ಮತ್ತು ಸಿಂಡಿಕೇಟು ಮಾಡಿರುವ ಶಿಫಾರಸ್ಸು ಮತ್ತು ಎನ್‌ಸಿಟಿಇಯು ನೀಡಿರುವ ಮಾನ್ಯತೆಯನ್ನು ಆಧರಿಸಿ 2004-2005ನೇ ಶೈಕ್ಷಣಿಕ ಸಾಲಿನಿಂದ ಮೇಲ್ಕಂಡ ಕಾಲೇಜಿಗೆ ಸಂಯೋಜನೆ ಮಂಜೂರು ಮಾಡುವ ವಿಚಾರವನ್ನು ಸಂವೀಕ್ಷಿಸಲಾಗಿದೆ.

2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದ 59ನೇ ಪ್ರಕರಣದ (11)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲ್ಕಂಡ ಕಾಲೇಜಿನಲ್ಲಿ ಬಿ.ಎಡ್ ಕೋರ್ಸನ್ನು 100 (ನೂರು) ವಿದ್ಯಾರ್ಥಿ ಪ್ರಮಾಣದೊಂದಿಗೆ ಸಂಯೋಜನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಲು ನಾನು ನಿರ್ದೇಶಿತನಾಗಿದ್ದೇನೆ.

ಷರತ್ತುಗಳು:-

(1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದು ಶಾಶ್ವತ ಅನುದಾನರಹಿತ ಕಾಲೇಜೆಂದು ಪರಿಗಣಿಸತಕ್ಕದ್ದು.

(2) ಶಾಶ್ವತ ಅನುದಾನರಹಿತ ಷರತ್ತಿಗೆ ಒಳಪಡಲು ಕಾಲೇಜು ದಿನಾಂಕ: 14-03-2005ರಂದು ಸಲ್ಲಿಸಿರುವ ಮಧ್ಯಂತರ ಒಪ್ಪಂದದಲ್ಲಿನ ನಿಭಂದನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(3) ಮೇಲ್ಕಂಡ ಕಾಲೇಜು ಎನ್‌ಸಿಟಿಇಯ ಅಧಿನಿಯಮ ಮತ್ತು ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

(4) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.

(5) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(6) ಸ್ಥಳೀಯ ವಿಚಾರಣಾ ಸಮಿತಿ ಹಾಗೂ ಎನ್‌ಸಿಟಿಇಯು ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

3) ಎಂಟು ದಿನಗಳೊಳಗಾಗಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

ತಮ್ಮ ನಂಬುಗೆಯ,

(ಸುಂದರ ರಾಜ ಗುಪ್ತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ).

ಪ್ರತಿ ಇವರಿಗೆ:-

(1) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು-560 001
(2) ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಳಗಾಂ-590 001
(3) ಕಾರ್ಯದರ್ಶಿ, ಲಕ್ಷ್ಮಿ ಎಜುಕೇಷನ್ ಟ್ರಸ್ಟ್, ವಿದ್ಯಾನಗರ್, ಗೋಕಾಕ್, ಬೆಳಗಾಂ ಜಿಲ್ಲೆ
(4) ಪ್ರಾಂಶುಪಾಲರು, ಶ್ರೀ ಲಕ್ಷ್ಮಣರಾವ್ ಜಾರಕಿಹೋಳಿ ಕಾಲೇಜ್ ಆಫ್ ಎಜುಕೇಷನ್, ಗೋಕಾಕ್, ಬೆಳಗಾಂ ಜಿಲ್ಲೆ.

PRINCIPAL
SHRI LAXMANRAO JARKIHOLI
COLLEGE OF EDUCATION (B.Ed.)
Vidyanagar, GOKAK-591307.